**ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ**

***ಸಿ.ಸಿ.ನಂಃ 348/2018***

ಡಿಡಬ್ಲ್ಯು -1

***ದಿನಾಂಕಃ  29.11.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಡಿಸಿಡಿ ವಕೀಲರಿಂದ

ದಿಃ 3.3.2017 ರಂದು ಬಶೀರ್‌ರವರಿಗೆ ಸೇರಿದ 4 ಚೀಲ ಮತ್ತು ಶಿವರವರಿಗೆ ಸೇರಿದ 100 ಚೀಲ ಕರಿಮೆಣಸು ಕಾಣೆಯಾಗಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ಶಿವ ಮತ್ತು ಬಶೀರ್‌ರವರು ಕರಿಮೆಣಸನ್ನು ಮಾಲ್ದಾರೆಯ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಇಟ್ಟಿದ್ದರು. ಒಬ್ಬ ರೈತ ತನ್ನ ಕರಿಮೆಣಸನ್ನು ಸದರಿ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಇಡುವ ಸಂಧರ್ಭದಲ್ಲಿ ಸದರಿ ಸಹಕಾರ ಸಂಘದವರು ಕರಿಮೆಣಸನ್ನು ಇಟ್ಟಿರುವ ಬಗ್ಗೆ ರಶೀತಿಯನ್ನು ನೀಡಿರುತ್ತಾರೆ. ಅದೇ ರೀತಿ ವಾಪಾಸ್ಸು ಪಡೆಯುವಾಗ ಸದರಿ ಒಂದು ಚೀಲಕ್ಕೆ ರೂ. 20 ನಂತೆ ಬಾಡಿಗೆ ಪಡೆದು ಸದರಿ ಕರಿಮೆಣಸನ್ನು ವಾಪಾಸ್ಸು ನೀಡುತ್ತಿರುವ ಬಗ್ಗೆ ರಶೀತಿ ನೀಡುತ್ತಾರೆ. ನಾನೂ ಕೂಡಾ ಕರಿಮೆಣಸನ್ನು ಸದರಿ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಇಡುವ ಸಂಧರ್ಭದಲ್ಲಿ ರಶೀತಿಯನ್ನು ಪಡೆದುಕೊಂಡು ಅದನ್ನು ವಾಪಾಸ್ಸು ಪಡೆಯುವ ಸಂಧರ್ಭದಲ್ಲಿ ಒಂದು ಚೀಲಕ್ಕೆ ರೂ. 20 ರಂತೆ ಬಾಡಿಗೆ ಪಾವತಿಸಿ ರಶೀತಿಯನ್ನು ಪಡೆಯುತ್ತೇನೆ.

ಸದರಿ ಕೃಷಿ ಪತ್ತಿನ ಸಹಕಾರಿ ಸಂಘದ ಹಿಂಭಾಗದಲ್ಲಿ ಬ್ಯಾಂಕಿನ ಗೋದಾಮು ಇದೆ. ಸದರಿ ಗೋದಾಮಿಗೆ ಸಹಕಾರ ಸಂಘದ ಮುಖ್ಯ ದ್ವಾರದಲ್ಲಿಯೇ ಹೋಗಿ ಬರಬೇಕಾಗುತ್ತದೆ. ಸದರಿ ಬ್ಯಾಂಕಿನ ಕಾರ್ಯದರ್ಶಿಯವರಾದ ಚಾಸಾ-2 ರವರು ಸದರಿ ಗೋದಾಮಿನ ಪಕ್ಕದಲ್ಲಿಯೇ ಬ್ಯಾಂಕಿನ ವಸತಿಗೃಹದಲ್ಲಿ ವಾಸಿಸುತ್ತಿರುತ್ತಾರೆ. ಸದರಿ ಕರಿಮೆಣಸು ಕಾಣೆಯಾಗಿರುವ ಬಗ್ಗೆ ಶಿವು ಮತ್ತು ಬಶೀರ್ ಎಂಬುವವರು 1 ನೇ ಆರೋಪಿಗೆ ದೂರವಾಣಿ ಕರೆ ಮಾಡಿ ಕೇಳಿರುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿ ಕೆಲಸಕ್ಕೆ ರಜೆ ಹಾಕಿರುತ್ತಾರೆ. ಸಹಕಾರ ಸಂಘದಲ್ಲಿ ಮಾಲನ್ನು ದಾಸ್ತಾನು ಮಾಡಿದ ಸಂಧರ್ಭದಲ್ಲಿ ಅದಕ್ಕೆ ಸದರಿ ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಹೊಣೆಗಾರರಾಗಿರುತ್ತಾರೆ. ಸದರಿ ಬಶೀರ್ ಮತ್ತು ಶಿವ ರವರು 1 ನೇ ಆರೋಪಿಗೆ ದೂರವಾಣಿ ಕರೆ ಮಾಡಿದಾಗ ಕರೆಯನ್ನು ಸ್ವೀಕರಿಸಿರುವುದಿಲ್ಲ, ಆ ಸಂಧರ್ಭದಲ್ಲಿ ಬಶೀರ್ ಮತ್ತು ಶಿವರವರು 1 ನೇ ಆರೋಪಿ ಸದರಿ ಕರಿಮೆಣಸಿನ 104 ಚೀಲವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ದಿಃ 6.3.2017 ರಂದು ಸದರಿ ಬಶೀರ್ ಮತ್ತು ಶಿವರವರು ವಕೀಲರ ಮೂಲಕ ಸಹಕಾರಿ ಸಂಘಕ್ಕೆ ಮೆಣಸು ಕಾಣೆಯಾಗಿರುವ ಬಗ್ಗೆ ಕಾನೂನು ತಿಳುವಳಿಕೆ ಪತ್ರವನ್ನು ನೀಡಿರುತ್ತಾರೆ. ಸದರಿ ಕರಿಮೆಣಸು ಕಾಣೆಯಾಗಿರುವ ಬಗ್ಗೆ ಕಾನೂನು ತಿಳುವಳಿಕೆ ಪತ್ರ ನೀಡಿದ ನಂತರ ಸಹಕಾರಿ ಸಂಘಕ್ಕೆ ಕಾರ್ಯದರ್ಶಿ ಮತ್ತು ಅಧ್ಯಕ್ಷರಿಗೆ ಗೊತ್ತಾಗಿರುತ್ತದೆ. ನಂತರ ದಿಃ 1.4.2017 ರಂದು ಸದರಿ ಸಹಕಾರಿ

ಸಂಘದ ಕಾರ್ಯದರ್ಶಿಯವರು ಪೋಲೀಸರಿಗೆ ಫಿರ್ಯಾದನ್ನು ನೀಡಿರುತ್ತಾರೆ. ಸದರಿ ಬಶೀರ್ ಮತ್ತು ಶಿವರವರು ಕಾನೂನು ತಿಳುವಳಿಕೆ ನೋಟೀಸ್ಸಿನಲ್ಲಿ ಸದರಿ ಕರಿಮೆಣಸಿನ ಮೌಲ್ಯ 48 ಲಕ್ಷ ಎಂದು ನಮೂದಿಸಿರುತ್ತಾರೆ. ಯಾವ ಕಾರಣಕ್ಕಾಗಿ ದಿಃ 6.3.2017 ರಂದು ಕರಿಮೆಣಸು ಕಾಣೆಯಾಗಿರುವ ಬಗ್ಗೆ ಗೊತ್ತಿದ್ದರೂ ಕೂಡಾ ವಿಳಂಬವಾಗಿ ದಿಃ 1.4.2017 ರಂದು ಫಿರ್ಯಾದನ್ನು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಅವರಿಗೆ ಗೊತ್ತಾಗಬೇಕು.

ದಿಃ 6.7.2017 ರಂದು ಪೋಲೀಸರು ನಮ್ಮ ಗೋದಾಮಿಗೆ ಬಂದು ರಾಶಿಯಾಗಿ ಹಾಕಿದ್ದ ಕರಿಮೆಣಸನ್ನು ನಮ್ಮ ಡ್ರೈವರ್ ಮೂಲಕ ಈಚರ್ ಗಾಡಿಯನ್ನು ತರಿಸಿ ಕರಿಮೆಣಸನ್ನು ಅಮಾನತ್ತು ಮಾಡಿಕೊಂಡು ಹೋಗಿರುತ್ತಾರೆ. ಸದರಿ ಲಾರಿಗೆ 5 ಜನ ಅಂದರೆ ಶಹೀರ್, ಮಾಲೀಕ್, ಸುರೇಶ್, ಸಲ್ಮಾನ್ ಮತ್ತು ಮಹಾದೇವ್ ಎಂಬುವವರು ತುಂಬಿಸಿರುತ್ತಾರೆ. ಮೇಲೆ ತಿಳಿಸಿದ 5 ಜನ ವ್ಯಕ್ತಿಗಳು ನಮ್ಮ ಕೆಲಸಗಾರರಾಗಿದ್ದು ಅವರು ನಮ್ಮ ಗೋದಾಮಿನಲ್ಲೇ ವಾಸಿಸುತ್ತಾರೆ. ಪೋಲೀಸರು ಅಮಾನತ್ತುಪಡಿಸಿಕೊಂಡ ಮಾಲಿನೊಂದಿಗೆ ಸುಮಾರು ಒಂದೂವರೆ ಗಂಟೆ ಸಮಯದಲ್ಲಿ ಹೊರಡಿರುತ್ತಾರೆ. ನಂತರ ಪೋಲೀಸರು ನನ್ನನ್ನು ದಿಃ 7.7.2017 ರಂದು ಮಡಿಕೇರಿಯ ಡಿಸಿಐಬಿ ಆಫೀಸಿಗೆ ಬರುವಂತೆ ನನಗೆ ತಿಳಿಸಿರುತ್ತಾರೆ. ಪೋಲೀಸರು ನನ್ನಿಂದ ಅಮಾನತ್ತು ಪಡಿಸಿಕೊಳ್ಳಲಾದ ಮಾಲಿಗೆ ಅಂದರೆ 104 ಚೀಲಕ್ಕೆ 1 ರಿಂದ 104 ಎಂದು ನಮ್ಮ ಗೋಡಾನ್‌ನಲ್ಲಿಯೇ ಹಸಿರು ಬಣ್ಣದ ಶಾಹಿಯಿಂದ ಕ್ರಮಸಂಖ್ಯೆಯನ್ನು ಬರೆದಿರುತ್ತಾರೆ.

ಪೋಲೀಸರು ನನ್ನಿಂದ ಅಮಾನತ್ತುಪಡಿಸಿಕೊಳ್ಳಲಾದ ಕರಿಮೆಣಸನ್ನು ಮಡಿಕೇರಿಗೆ ತೆಗೆದುಕೊಂಡು ಹೋಗಿದ್ದು ನಂತರ ದಿಃ 7.7.2017 ರಂದು ಮಡಿಕೇರಿಗೆ ಬರುವಂತೆ ತಿಳಿಸಿದ್ದರು. ಅದರಂತೆ ನಾನು ಮಡಿಕೇರಿಗೆ ಹೋದ ಸಂಧರ್ಭದಲ್ಲಿ ಪೋಲೀಸರು ನನ್ನನ್ನು ಸಾಕ್ಷಿದಾರರನ್ನಾಗಿ ಸಹಿ ಮಾಡಿಸಿಕೊಂಡಿರುತ್ತಾರೆ. ಆ ಸಂಧರ್ಭದಲ್ಲಿ ಸದರಿ ಕರಿಮೆಣಸು ನನಗೆ ಸೇರಿದ್ದು ಮತ್ತು ಅದರ ಬಗ್ಗೆ ಸೂಕ್ತ ದಾಖಲಾತಿಯನ್ನು ನೀಡುತ್ತೇನೆ ಎಂದು ನಾನು ತಿಳಿಸಿರುತ್ತೇನೆ. ಆದರೆ ಪೋಲೀಸರು ನನ್ನ ಮಾತನ್ನು ಕೇಳದೆ ಒಂದು ವೇಳೆ ಸದರಿ ಮಾಲು ನಿಮಗೆ ಸೇರಿದ್ದರೆ ನ್ಯಾಯಾಲಯದ ಮೂಲಕ ಬಿಡುಗಡೆ ಮಾಡಿಸಿಕೊಳ್ಳುವಂತೆ ನನಗೆ ತಿಳಿಸಿರುತ್ತಾರೆ. ಸದರಿ ಮಾಲನ್ನು ಆರೋಪಿ 1 ರವರು ಮಾಲ್ದಾರೆಯ ಸಹಕಾರಿ ಸಂಘದಲ್ಲಿ ದುರುಪಯೋಗಪಡಿಸಿಕೊಂಡು ನಿಮಗೆ ಮಾರಿರುವ ಬಗ್ಗೆ ಮಾಹಿತಿ ಇರುವ ಕಾರಣ ಅದನ್ನು ಬಂದು ಅಮಾನತ್ತುಪಡಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ನಾನು 1 ನೇ ಆರೋಪಿಯಿಂದ ಯಾವುದೇ ಮಾಲನ್ನು ಕೊಂಡುಕೊಂಡಿರುವುದಿಲ್ಲ. ಪೋಲೀಸರು ಹೇಳಿರುವ ವಿಚಾರ ಸತ್ಯಕ್ಕೆ ದೂರವಾದುದು.

1 ನೇ ಆರೋಪಿಯಿಂದ ಸದರಿ ಸಹಕಾರಿ ಸಂಘದಲ್ಲಿ ದುರುಪಯೋಗಪಡಿಸಿಕೊಂಡ ಕರಿಮೆಣಸನ್ನು ನನಗೆ ಮಾರಾಟ ಮಾಡಿರುವ ಬಗ್ಗೆ ಪೋಲೀಸರ ಅನಿಸಿಕೆಯಾಗಿತ್ತು, ಆದರೆ ಪೋಲೀಸರು ನನ್ನನ್ನು ದಸ್ತಗಿರಿ ಮಾಡಿರುವುದಿಲ್ಲ ಮತ್ತು ನನ್ನ ವಿರುದ್ದ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ, ಸಿದ್ದಾಪುರದಲ್ಲಿ ಕರಿಮೆಣಸನ್ನು ಖರೀದಿ ಮಾಡುವ ವ್ಯಾಪಾರವನ್ನು ನಾವು ಮತ್ತು ಬಶೀರ್ ಎಂಬುವವರು ಮಾಡುತ್ತೇವೆ. ಆದರೆ ಪೋಲೀಸರು ನಮ್ಮ ಗೋದಾಮಿನಲ್ಲೇ ಯಾವ ಕಾರಣಕ್ಕಾಗಿ ಅಮಾನತ್ತುಪಡಿಸಿಕೊಂಡರು ಎಂದರೆ ನಮ್ಮ ಗೋಡಾನಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕರಿಮೆಣಸು ಸಿಗುವ ಕಾರಣ ಅಮಾನತ್ತುಪಡಿಸಿಕೊಂಡಿರುತ್ತಾರೆ. ಪೋಲೀಸರು ಒಂದು ಚೀಲಕ್ಕೆ 73 ಕೆ

ಜಿ ಯಂತೆ ನಮ್ಮ ಗೋದಾಮಿನಲ್ಲಿದ್ದ ಸ್ಕೇಲಿನ ಮೂಲಕ ತೂಕ ಮಾಡಿ 104 ಚೀಲ ತೆಗೆದುಕೊಂಡಿರುತ್ತಾರೆ. ಕರಿಮೆಣಸನ್ನು ನಮ್ಮ ಗೋದಾಮಿನಲ್ಲಿ ಅಮಾನತ್ತುಪಡಿಸಿದ ಸಮಯದಲ್ಲಿ 1 ಕೆ ಜಿಗೆ ಸುಮಾರು 700 ರೂ ಇತ್ತು, ಅದರ ಒಟ್ಟಾರೆ ಮೌಲ್ಯ 48 ಲಕ್ಷ ಆಗಿತ್ತು, ನಾವು ಕರಿಮೆಣಸನ್ನು ಕೊಂಡುಕೊಂಡ ನಂತರ ಭಾರತಾದಾದ್ಯಂತ ಮಾರಾಟ ಮಾಡುತ್ತೇವೆ. ಅದರ ಬಗ್ಗೆ ನಾವು ಪರವಾನಿಗೆಯನ್ನು ಹೊಂದಿದ್ದೇವೆ. ನಾವು ವ್ಯವಹಾರಿಕವಾಗಿ ಲಾಭ ಪಡೆಯುವ ಉದ್ದೇಶದಿಂದ ಅದನ್ನು ನಾವು ಭಾರತದಾದ್ಯಂತ ಮಾರಾಟ ಮಾಡುತ್ತೇವೆ.

ಸದರಿ ಕರಿಮೆಣಸನ್ನು ಪೋಲೀಸರು ಅಮಾನತ್ತು ಮಾಡಿದ ಕಾರಣ ನಮಗೆ 48 ಲಕ್ಷ ನಷ್ಟ ಸಂಭವಿಸಿರುತ್ತದೆ ಮತ್ತು ನಮ್ಮ ಸಂಸ್ಥೆಯ ಪ್ರತಿಷ್ಟೆ ಹಾಳಾಗಿರುತ್ತದೆ. ಸಾರ್ವಜನಿಕ ವಲಯದಲ್ಲಿ ನಮ್ಮ ವಿರುದ್ದ ಪೋಲೀಸರು ಪಿತೂರಿಯನ್ನು ಮಾಡಿ ಈ ರೀತಿ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಸಹಕಾರ ಸಂಘದ ಎಲ್ಲಾ ಅಧಿಕಾರ ವರ್ಗದವರ ಒಳಸಂಚಿನಿಂದಾಗಿ ನಮ್ಮ ಕರಿಮೆಣಸನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಮತ್ತು ಇದರಿಂದಾಗಿ ನಾವು ಮಾನಸಿಕವಾಗಿ ಕುಂದಿಹೋಗಿರುತ್ತೇವೆ. ಸದರಿ ಕರಿಮೆಣಸಿನ ಮಾಲೀಕರು ನಮ್ಮ ಸಂಸ್ಥೆಯಾಗಿರುತ್ತದೆ. ಸದರಿ ಸೊತ್ತು ನಮಗೆ ಸೇರಿರುವುದರಿಂದ ಅದನ್ನು ಮಾನ್ಯ ನ್ಯಾಯಾಲಯವು ಅದನ್ನು ನಮಗೆ ಬಿಡುಗಡೆಗೊಳಿಸಬೇಕೆಂದು ನಮ್ಮ ಪ್ರಾರ್ಥನೆ. ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಸೊತ್ತು ಯಾರಿಗೆ ಸೇರುತ್ತದೆ ಎಂಬುದು ಪರಿಗಣಿಸುವಂತೆ ಆದೇಶ ನೀಡಿರುವುದರಿಂದ ಅದನ್ನು ನಮಗೆ ನೀಡಬೇಕೆಂದು ಕೋರಿಕೊಳ್ಳುತ್ತೇನೆ.

ದಿಃ 1.7.2017 ರಿಂದ 7.7.2017 ರವರೆಗೆ ನಾವು ಪ್ಲಾಂಟರ್ಸ್‌ನಿಂದ ಕರಿಮೆಣಸು ಮತ್ತು ಕಾಫಿಯನ್ನು ಖರೀದಿ ಮಾಡಿರುವ ಖರೀದಿ ಇನ್‌ವಾಯ್ಸ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-4 , ಸರ್ಕಾರಕ್ಕೆ 5,5,870/- ಆದಾಯ ತೆರಿಗೆ ಪಾವತಿ ಮಾಡಿರುವ 2017 ಮತ್ತು 18 ನೇ ವರ್ಷದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-5 , ಸದರಿ ವರ್ಷದಲ್ಲಿ ಸುಮಾರು 47 ಕೋಟಿ ವಹಿವಾಟನ್ನು ನಡೆಸಿರುತ್ತೇವೆ. ನೆಲ್ಲಿಹುದಿಕೇರಿ ಕಾರ್ಪೋರೇಷನ್ ಬ್ಯಾಂಕ್‌ನ ದಿಃ 2.1.2017 ರಿಂದ 31.7.2017 ವರೆಗಿನ ಸ್ಟೇಟ್‌ಮೆಂಟ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಡಿ-6 ಎಂದೂ ಗುರುತಿಸಲಾಯಿತು. ನಾವು ಪ್ಲ್ಯಾಂಟರ್ಸ್‌ನಿಂದ ಕಾಫಿ ಮತ್ತು ಕರಿಮೆಣಸನ್ನು ಖರೀದಿ ಮಾಡಿ ಹಣವನ್ನು ಬ್ಯಾಂಕಿನಿಂದ ಆರ್‌ಟಿಜಿಎಸ್ ಮತ್ತು ನೆಫ್ಟ್ ಮೂಲಕ ಕಳುಹಿಸಿರುವುದರಿಂದ ಅದನ್ನು ರುಜುವಾತುಪಡಿಸುವ ಸಲುವಾಗಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆಗೆ ಶ್ರೀ ಡಿಸಿಡಿ ವಕೀಲರು ಕಾಲಾವಕಾಶವನ್ನು ಕೋರಿರುವುರಿಂದ ಕಾಲಾವಕಾಶ ನೀಡಲಾಯಿತು.

CC No.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-

**(ಕೋನಪ್ಪ ಎನ್.ವಿ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ವಿರಾಜಪೇಟೆ

CC No.